ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಹೊನ್ನಾವರ.

ಸಿಸಿ ನಂಃ 1547/2021

ಪಿ ಡಬ್ಲುಃ 01

ಸಿ ಡಬ್ಲುಃ 01

| | |
|---|---|
| ಸಾಕ್ಷಿದಾರರ ಹೆಸರು | ರಾಜೇಶ ಮೇಸ್ತಾ |
| ತಂದೆಯ ಹೆಸರು | ಗಣಪಯ್ಯ ಮೇಸ್ತಾ |
| ವಯಸ್ಸು | 37 |
| ಉದ್ಯೋಗ | ಕೃಷಿ |
| ವಾಸ್ತವ್ಯ | ಖರ್ವಾ |

ಸಾಕ್ಷಿಯನ್ನು ದಿನಾಂಕಃ 12-04-2023 ರಂದು ಕರೆಸಲಾಯಿತು ಮತ್ತು ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ**

ಆರೋಪಿತರ ಪರಿಚಯ ಇದೆ. ಅವರು ನಮ್ಮ ಪಕ್ಕದ ಊರಿನವರು. ನನಗೆ ಸೇರಿದ ಜಮೀನು ಖರ್ವಾ ಗ್ರಾಮದ ಸರ್ವೆ ನಂ. 748 ರಲ್ಲಿ 11 ಗುಂಟೆ ಇದ್ದು ಅದು ನನ್ನ ತಂದೆಯ ಹೆಸರಿನಲ್ಲಿದೆ. ನಮ್ಮ ಕೊಟ್ಟಿಗೆಗೆ ಹೋಗಲು ಕಾಲು ದಾರಿ ಇದ್ದು ಅದನ್ನು ಆರೋಪಿತರು ಕೂಡಾ ಉಪಯೋಗಿಸುತ್ತಿದ್ದು ನಂತರ ಆರೋಪಿತರು ಸದ್ರಿ ಕಾಲುದಾರಿಯನ್ನು ಅಗೆದು ಅಗಲ ಮಾಡಲು ಪ್ರಯತ್ನಿಸುತ್ತಿದ್ದರು. ಈ ಕುರಿತು 2-3 ಬಾರಿ ಪೋಲಿಸರಿಗೆ ದೂರನ್ನು ನೀಡಿರುತ್ತೇನೆ. ಆಗ ಪೋಲಿಸರು ಆರೋಪಿತರನ್ನು ಠಾಣೆಗೆ ಕರೆದು ಬುದ್ದಿವಾದ ಹೇಳಿರುತ್ತಾರೆ. ಆ ನಂತರ ಈ ಕುರಿತು ಮೂಲ ದಾವಾ ನಂ. 47/20 ನ್ನು ನ್ಯಾಯಾಲಯದಲ್ಲಿ ದಾಖಲಿಸಿರುತ್ತೇನೆ. ಸದ್ರಿ ದಾವೆಯಲ್ಲಿ ನ್ಯಾಯಾಲಯ ಆರೋಪಿತರ ವಿರುದ್ಧ ತಡೆಯಾಜ್ಞೆಯನ್ನು ನೀಡಿರುತ್ತದೆ. ಆ ನಂತರ ದಿಃ 22.06.2020 ರಂದು ಆರೋಪಿತರು ಮತ್ತೆ ನಮಗೆ ತೊಂದರೆ ಕೊಟ್ಟಿರುತ್ತಾರೆ. ಆ ಬಗ್ಗೆ ನಾನು ದೂರನ್ನು ಕೊಟ್ಟಿದ್ದು ಪೋಲಿಸರು ಅವರನ್ನು ಠಾಣೆಗೆ ಕರೆಸಿ ತೊಂದರೆ ಕೊಡದಂತೆ ತಾಕೀತು ಮಾಡಿರುತ್ತಾರೆ.

ದಿಃ 18.07.2021 ರಂದು ಸಂಜೆ 6 ಗಂಟೆ ಸಮಯದಲ್ಲಿ ನಮ್ಮ ಕೊಟ್ಟಿಗೆಯ ಕೆಳಗಡೆ ಒಂದು ಸಿಮೆಂಟಿನ ತಳಪಾಯ ಇದ್ದು ಅದನ್ನು ಕಿತ್ತು ಹಾಕಲು ಆರೋಪಿತರು ಸರ್ವೆ ನಂ. 748 ಕ್ಕೆ ಅತಿಕ್ರಮ ಪ್ರವೇಶ ಮಾಡಿ ಸದ್ರಿ ತಳಪಾಯವನ್ನು ಕಿತ್ತುಹಾಕಿರುತ್ತಾರೆ. ನಾನು ಮತ್ತು ಚಾಸಾ 4 ರವರು ಆರೋಪಿತರನ್ನು ಪ್ರಶ್ನಿಸಿದಾಗ ಆರೋಪಿತರು ನಮ್ಮನ್ನು ತಡೆದು ನಾಗರಾಜ ವಿಷ್ಣು ಮೇಸ್ತಾ ಮತ್ತು 1 ರಿಂದ 5 ನೇ ಆರೋಪಿತರು ನನ್ನ ಮುಖ ಮತ್ತು ಮೈಮೇಲೆ ಕೈ ಯಿಂದ ನನಗೆ ಹಲ್ಲೆ ಮಾಡಿರುತ್ತಾರೆ. ಆರೋಪಿತರು ನನ್ನನ್ನು ಕುರಿತು ಬೋಳಿಮಕ್ಕಳೇ ನಿಮ್ಮನ್ನು ಬಿಡುವುದಿಲ್ಲ, ಕೊಟ್ಟ ದೂರನ್ನು ವಾಪಾಸು ತೆಗೆದುಕೊಳ್ಳಬೇಕು, ಇಲ್ಲದಿದ್ದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿರುತ್ತಾರೆ. ನಂತರ ಆರೋಪಿತರು ಚಾಸಾ 4 ರವರನ್ನು ದೂಡಿ 1 ನೇ ಆರೋಪಿ ಚಾಸಾ 4 ರವರ ಎದೆಯ ಮೇಲೆ ಕುಳಿತು ಅವರ ಎದೆಗೆ ಮತ್ತು ಬೆನ್ನಿಗೆ ಹಲ್ಲೆ ಮಾಡಿರುತ್ತಾನೆ. ನಂತರ ನನ್ನ ತಂದೆ ತಾಯಿ ಮತ್ತು ಜನರು ಸ್ಥಳಕ್ಕೆ ಬಂದಿರುತ್ತಾರೆ. ನನ್ನ ತಂದೆ

ತಾಯಿ ಜೋರಾಗಿ ಕೂಗಿಕೊಂಡಾಗ ಆರೋಪಿತರು ನಿಮ್ಮನ್ನು ಇಷ್ಟಕ್ಕೆ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿ ಅಲ್ಲಿಂದ ಹೊರಟು ಹೋಗಿರುತ್ತಾರೆ. ನಂತರ ದಿಃ 23.07.2020 ರಂದು ಈ ಕುರಿತು ನಾನು ಪೋಲಿಸ್ ಠಾಣೆಗೆ ದೂರನ್ನು ನೀಡಿರುತ್ತೇನೆ. ಆರೋಪಿತರು ನನಗೆ ಹೆದರಿಸಿದ ಕಾರಣ ನಾನು ಸದ್ರಿ ದೂರನ್ನು ತಡವಾಗಿ ಕೊಟ್ಟಿರುತ್ತೇನೆ. ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಸದ್ರಿ ದಾಖಲೆಯನ್ನು ನಿಪಿ. 1 ಎಂದು , ಸಾಕ್ಷಿಯ ಸಹಿಯನ್ನು ನಿಪಿ. 1 ಎ ಎಂದು ಗುರುತಿಸಲಾಯಿತು.

ದಿಃ 24.07.2020 ರಂದು ನಾನು ತೋರಿಸಿಕೊಟ್ಟ ಸ್ಥಳದಲ್ಲಿ ಮಧ್ಯಾಹ್ನ 3.30 ರ ಸಮಯಕ್ಕೆ ಪೋಲಿಸರು ಮತ್ತು ಚಾಸಾ 2 ಮತ್ತು 3 ರವರು ಕೂಡಾ ಹಾಜರಿದ್ದು ಸದ್ರಿ ಸ್ಥಳದಲ್ಲಿ ಪೋಲಿಸರು ಸ್ಥಳ ಪಂಚನಾಮೆಯನ್ನು ಜರುಗಿಸಿರುತ್ತಾರೆ. ಸ್ಥಳದಲ್ಲಿ ಪೋಲಿಸರು ಪೋಟೋವನ್ನು ಕೂಡಾ ತೆಗೆದಿರುತ್ತಾರೆ. ಸಾಕ್ಷಿಗೆ ಪಂಚನಾಮೆಯನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಸದ್ರಿ ದಾಖಲೆಯನ್ನು ನಿಪಿ. 2 ಎಂದು , ಸಾಕ್ಷಿಯ ಸಹಿಯನ್ನು ನಿಪಿ. 2 ಎ ಎಂದು, ಪೋಟೋವನ್ನು ನಿಪಿ 3 ಎಂದು ಗುರುತಿಸಲಾಯಿತು. ಘಟನೆಯ ಬಗ್ಗೆ ಆರೋಪಿತರೇ ಒಂದು ವಿಡಿಯೋ ರೆಕಾರ್ಡ ಮಾಡಿದ್ದು ಅದನ್ನು ನಮ್ಮ ಸಮಾಜದ ಒಂದು ವಾಟ್ಸಆಪ ಗ್ರೂಪ್ ಇದ್ದು ಅದರಲ್ಲಿ ಆರೋಪಿತರೇ ಅಪ್ ಲೋಡ್ ಮಾಡಿರುತ್ತಾರೆ. ಅದನ್ನು ನ್ಯಾಯಾಲಯ ಅನುಮತಿ ನೀಡಿದರೆ ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ.

(ಈ ಹಂತದಲ್ಲಿ ಸ ಸ ಅ ರವರು ಸಂಬಂಧಿತ ಅರ್ಜಿಯನ್ನು ಸಲ್ಲಿಸಿದ ಕಾರಣ ಸದ್ರಿ ಅರ್ಜಿಗೆ ತಕರಾರು ಸಲ್ಲಿಸಲು ಅವಕಾಶ ನೀಡಿ ವಿಚಾರಣೆಯನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

Sd/-

ಪ್ರ ದ ನ್ಯಾದಂ ಹೊನ್ನಾವರ.